ನಸೀಬು ಲಾಯ್ಕಿದೆ. ಇಷ್ಟಾದ್ರೂ ಒಂದು ಹುಡುಗೀಂತ ಸಿಕ್ತಲ್ಲ” ಸಂತೈಸಿದ್ದರು ಶಾಸ್ತ್ರಿಗಳು. “ಇನ್ನ್ಯಾವ ರಂಭೇನ ಹುಡುಕಿಕೊಂಡು ಹೋಗೋಕಾಗುತ್ತೆ?” ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಮಾತಾಡಿದ್ದ ವಿಶ್ವೇಶ್ವರ. ಮಗನಿಗೆ ಈ ಹೆಣ್ಣು ‘ಅಡ್ಡಿಲ್ಲ’ ಅನ್ನಿಸಿದೆ ಎಂದು ಫಣಿಯಮ್ಮನಿಗೆ ಮನವರಿಕೆಯಾಗಿ ಒಂಥರಾ ಕಸಿವಿಸಿಯಾಗಿತ್ತು.

ಅತ್ತ ಮಗನೂ ತಮ್ಮ ಇಂಗಿತಕ್ಕೆ ಸುಮುಖನಾಗಿ ವರ್ತಿಸದೆ, ಇತ್ತ ಗಂಡನೂ ಹೆದರಿಕೆ ಹುಟ್ಟಿಸುವ ಮಾತಾಡಿ, ಪರಿಸ್ಥಿತಿ ಗೊತ್ತು ಮಾಡಿಕೊಂಡ ಫಣಿಯಮ್ಮ ಅರೆಮನಸ್ಸಿನಿಂದಲೇ ಸೊಸೆಯನ್ನು ಬರಮಾಡಿಕೊಂಡಿದ್ದರು.

★★★

ಮೂರ್ನಾಲ್ಕು ತಿಂಗಳು ಹೆಂಡತಿಯ ಹಿಂದೆ ಮುಂದೆ ಸೆರಗು ಹಿಡಿದು ಎಂಬಂತೆ ಸುತ್ತಾಡಿಕೊಂಡು ಹೊಸ ಅನುಭವವನ್ನು ಮನಸೋಕ್ತ ಸುಖಿಸಿದ ವಿಶ್ವೇಶ್ವರ. ‘ಇನ್ನಾದರೂ ಎಲ್ಲಾ ಸುಸೂತ್ರವಾಗಿ ಮಗ ದಡ ಹತ್ತುತ್ತಾನೆ. ಬದುಕನ್ನು ಗಂಭೀರವಾಗಿ ಸ್ವೀಕರಿಸುತ್ತಾನೆ’ ಎಂದು ಶಾಸ್ತ್ರಿಗಳು ಕನಸಿದ್ದೇ ಬಂತು. ಶಾಸ್ತ್ರಿಗಳ ಹಿಂದೆ ಅವರ ಬಾಲದ ಹಾಗೆ ಹೋಗಿ ನಾಲ್ಕು ಮನೆಯ ಮೆಟ್ಟಿಲು ಹತ್ತಿಳಿದು

